ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20 : ದಿನಾಂಕ : 30–01–2020

ಪತ್ರಿಕಾ ಆಮಂತ್ರಣ

**1. FAREWELL PARADE:**

**Smt. Neelmani N. Raju, I.P.S.,**
**Director General and Inspector General of Police**
**Karnataka State.**

**Sri M.N. Reddy, I.P.S.,**
**Director General of Police and Commandant General, Home Guards, E/O Director, Civil Defence & Director, Fire Force, Karnataka State.**

**Sri R.H. Auradkar, I.P.S.**
**Dirctorf General of Police & Chairman and Managing Director Karnataka State police Housing & IDC Ltd., Karnataka State**

**Date: 31-01-2020 Friday. Time: 8-00 am.**

**Venue : K.S.R.P. Parade Ground, Koramangala, Bengaluru – 560 0034.**

**Contact Mobile No. 9480800074 / 9480800728**

**2. <u>ಬೀಳ್ಕೊಡುಗೆ ಸಮಾರಂಭ :</u>**

**ಶ್ರೀಮತಿ ನೀಲಮಣಿ ಎನ್. ರಾಜು, ಐಪಿಎಸ್.,**
**ಡಿಜಿ ಮತ್ತು ಐ.ಜಿ.ಪಿ.**

**ಶ್ರೀ ಎಂ. ಎನ್. ರೆಡ್ಡಿ, ಐಪಿಎಸ್,**
**ಡಿಜಿಪಿ**

**ಶ್ರೀ ಆರ್. ಎಚ್. ಔರಾದ್ಕರ್, ಐಪಿಎಸ್,**
**ಡಿಜಿಪಿ**

**ದಿನಾಂಕ: 31–01–2020 ಶುಕ್ರವಾರ ಸಮಯ: ಬೆಳಿಗ್ಗೆ 8.00 ಗಂಟೆಗೆ**

**ಸ್ಥಳ: ಕೆಎಸ್ಆರ್‌ಪಿ ಕವಾಯತು ಮೈದಾನ, ಕೋರಮಂಗಲ, ಬೆಂಗಳೂರು**

**ಸಂಪರ್ಕ: ಮೊ. ಸಂಖ್ಯೆ 9480800074 / 9480800728**

**3. <u>PRESS MEET:</u>**

National Horticultural Fair – 2020 by ICAR-IIHR
Theme:"Horticulture : Making Farming an Enterprise"

Date: 31-01-2020 Friday, Time: 11.30 am.

Venue: Indian Institute of Horticulture Research, Hessaraghatta, Bengaluru.

Note: Vehicle arrangements for Press meet has made from Press Club, Cubbon Park at 9.00 am on that day

Contact: Dr. R. Venkatakumar (Mobile No.7760835475)
Chairman, Publicity Committee,

Dr. Sridhar Gautam (Mobile No. 8002678768 / 9005760036)
K.N. Jagadish (Mobile No. 9844481108)

## ಪತ್ರಿಕಾ ಪ್ರಕಟಣೆ

## ಕರ್ನಾಟಕ ರಾಜ್ಯದಿಂದ ಚಾರ್‌ಧಾಮ್ ಹಾಗೂ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸಹಾಯಧನ ನೀಡಲು ಲಾಟರಿ ಪ್ರಕ್ರಿಯೆ

**ಬೆಂಗಳೂರು ಜನವರಿ 30 (ಕರ್ನಾಟಕ ವಾರ್ತೆ)**

2019–20 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಿಂದ ಚಾರ್‌ಧಾಮ್ ಯಾತ್ರೆ ಪೂರೈಸಿ ಸಹಾಯಧನವನ್ನು ಕೋರಿ ಆನ್‌ಲೈನ್ ಮತ್ತು ಮುದ್ದಾಂ ಆಗಿ ಸಲ್ಲಿಕೆಯಾಗಿರುವ ಅರ್ಜಿಗಳು ಸರ್ಕಾರದ ಅನುದಾನದ ಲಭ್ಯತೆಗಿಂತಲು ಹೆಚ್ಚಾಗಿ ಸ್ವೀಕೃತವಾಗಿರುವುದರಿಂದ ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು. ಚಾರ್‌ಧಾಮ್ ಯಾತ್ರೆ ಕೈಗೊಂಡು ಅರ್ಜಿ ಸಲ್ಲಿಸಿರುವ ಯಾತ್ರಾರ್ಥಿಗಳಲ್ಲಿ 2750 ಫಲಾನುಭವಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಲು ನ್ಯಾಯಿಕ ಸದಸ್ಯರು/ಕೇಂದ್ರ ಸ್ಥಾನಿಕ ಸಹಾಯಕರು ಮತ್ತು ಪ್ರವರ್ಗ 'ಎ' ಪ್ರವರ್ಗಕ್ಕೆ ಸೇರಿದ ಮೂರು ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಗಳನ್ನೊಳಗೊಂಡಂತೆ ರಚಿಸಿರುವ ಸಮಿತಿ ಸಮಕ್ಷಮ ಬಹಿರಂಗವಾಗಿ ಫೆಬ್ರವರ 5 ರಂದು ಬೆಳಿಗ್ಗೆ 9.30 ಗಂಟೆಗೆ ಬೆಂಗಳೂರು ಚಾಮರಾಜಪೇಟೆಯಲ್ಲಿರುವ ರಾಯ ರಾಯ ಛತ್ರದ ಆವರಣದಲ್ಲಿ ಪಾರದರ್ಶಕವಾಗಿ ವಿಡಿಯೋ ಚಿತ್ರೀಕರಣದೊಂದಿಗೆ ಲಾಟರಿ ಪ್ರಕ್ರಿಯೆ ನಡೆಸಲಾಗುವುದು.

ಸಹಾಯಧನ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುವ ಇಚ್ಛೆವುಳ್ಳ ಯಾತ್ರಾರ್ಥಿಗಳು ಬಹಿರಂಗವಾಗಿ ನಡೆಸಲಿರುವ ಲಾಟರಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದು ಎಂದು ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಪ್ರಕಟಣೆ ತಿಳಿಸಿದೆ.

## ನೀರಿನ ಸಮಸ್ಯೆ ಕುರಿತು
## ಫೆಬ್ರವರಿ 1 ರಂದು ನೇರ ಫೋನ್ ಇನ್ ಕಾರ್ಯಕ್ರಮ

ಬೆಂಗಳೂರು ಜನವರಿ 30 (ಕರ್ನಾಟಕ ವಾರ್ತೆ)

ಬೆಂಗಳೂರು ಜಲಮಂಡಳಿಯು ಫೆಬ್ರವರಿ 1 ರ ಶನಿವಾರದಂದು ಬೆಳಿಗ್ಗೆ 9.00 ರಿಂದ 10.30 ಗಂಟೆಯವರೆಗೆ ಮಂಡಳಿಯ ಅಧ್ಯಕ್ಷರೊಂದಿಗೆ ನೇರ ಫೋನ್–ಇನ್ ಕಾರ್ಯಕ್ರಮವನ್ನು ಆಯೋಜಿಸಿದೆ.

ಈ ಸಂಬಂದ ಅಂದು ಬೆಳಿಗ್ಗೆ 9.00 ರಿಂದ 10.30 ಗಂಟೆಯವರೆಗೆ ನೇರ ಫೋನ್–ಇನ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗು ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು ಕೊರತೆಗಳನ್ನು ಈ ಫೋನ್ –ಇನ್ ಕಾರ್ಯಕ್ರಮದ ಮೂಲಕ ಬಗೆಹರಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080–22945119 ಮೂಲಕ ಸಂಪರ್ಕಿಸಬಹುದಾಗಿದೆ.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಲು ಕೋರಿದೆ.

## PHONE-IN-PROGRAM

Bengaluru, 30th January (Karnataka Information)

BWSSB is conducting a Phone–in program with Chairman BWSSB on Saturday from 09-00 am to 10-30 am. Accordingly.

Phone-in Program with Chairman is held on 01-02-2020 from 09-00 am to 10-30 am. So we are here by requesting the public to discuss and redressal the grievances concerned with the Water Billing, Manhole Overflowing, Meter Reading issues, Improper Water Supply and Sanitary issues. Public can contact through the phone number 080-22945119.

It is requested to the Consumers to give the R.R. Number details before raising complaint.

## ಸಚಿವರ ಪ್ರವಾಸ

**ಬೆಂಗಳೂರು ಜನವರಿ 30 (ಕರ್ನಾಟಕ ವಾರ್ತೆ)**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಕಾಲ ಹಾಗೂ ಕಾರ್ಮಿಕ ಸಚಿವ ಹಾಗೂ ಚಾಮರಾಜನಗರ ಜಿಲ್ಲೆಯ ಉಸ್ತುವಾರಿ ಸಚಿವರು ಆದ ಎಸ್. ಸುರೇಶ್‌ಕುಮಾರ್ ಅವರು ಫೆಬ್ರವರಿ 1 ರಂದು ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಅಂದೇ ನಗರಕ್ಕೆ ಹಿಂದಿರುಗಲಿದ್ದಾರೆ.

## ಫೋನ್–ಇನ್ ಕಾರ್ಯಕ್ರಮ

ಬೆಂಗಳೂರು ಜಲಮಂಡಳಿಯು ಶನಿವಾರದಂದು ಬೆಳಗ್ಗೆ 09:00 ರಿಂದ 10:30 ರವರೆಗೆ ಮಂಡಳಿಯ ಮಾನ್ಯ ಅಧ್ಯಕ್ಷರೊಂದಿಗೆ ನೇರ ಫೋನ್–ಇನ್ ಕಾರ್ಯಕ್ರಮವನ್ನು ಆಯೋಜಿಸಿದೆ. ಈ ಸಂಬಂಧ **ದಿನಾಂಕ:01.02.2020 ರಂದು ಬೆಳಗ್ಗೆ 09:00 ರಿಂದ 10:30** ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಲು ಈ ಫೋನ್–ಇನ್ ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಲು ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಲು ಕೋರಲಾಗಿದೆ. ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: **080-22945119.**

## Phone-in program

Bengaluru, 30th January (Karnataka Information)

BWSSB is conducting a Phone-in program with Chairman BWSSB on Saturday from 09:00 am to 10:30 am. Accordingly, Phone-in Program with Chairman is held **on 01.02.2020 from 09:00 am to 10:30 am**. So we are here by requesting the public to discuss and redressal the grievances concerned with the Water Billing, Manhole Overflowing, Meter Reading issues, Improper Water Supply and Sanitary issues. Public can contact through the phone number:**080-22945119**.

- **It is requested to the Consumers to give the R.R.Number details before raising complaint**.

So please publish this information in the papers to reach public regarding the phone-in program.

## <u>ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರ :</u>
## <u>ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಅವಕಾಶ</u>

**ಬೆಂಗಳೂರು ಜನವರಿ 30 ( ಕರ್ನಾಟಕ ವಾರ್ತೆ ) :**

ಕರ್ನಾಟಕ ರಾಜ್ಯದ ಆಗ್ನೇಯ ಪದವೀಧರರ ಕ್ಷೇತ್ರ, ಪಶ್ಚಿಮ ಪದವೀಧರರ ಕ್ಷೇತ್ರ, ಈಶಾನ್ಯ ಶಿಕ್ಷಕರ ಕ್ಷೇತ್ರ ಹಾಗೂ ಬೆಂಗಳೂರು ಶಿಕ್ಷಕರ ಕ್ಷೇತ್ರಗಳ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ಕಾಲೋಚಿತಗೊಳಿಸಲು ನಾಮಪತ್ರಗಳ ಸ್ವೀಕೃತಿಯ ಕೊನೆಯ ದಿನಾಂಕದವರೆಗೆ ಹೆಸರು ಸೇರ್ಪಡೆಗೆ ಅವಕಾಶ ಕಲ್ಪಿಸಲಾಗಿದೆ.

ಪದವೀಧರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ನಮೂನೆ 18 ರಲ್ಲಿ ಹಾಗೂ ಶಿಕ್ಷಕರ ಮತಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ನಮೂನೆ 19 ರಲ್ಲಿ ದ್ವಿ–ಪ್ರತಿಯಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಗಳಿಗೆ ಅವಶ್ಯಕ ದಾಖಲೆಗಳೊಂದಿಗೆ ಸಲ್ಲಿಸಬಹುದು

ಅಲ್ಲದೆ, ಈ ಎಲ್ಲಾ ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ತಯಾರಿಸಿ ಅಂತಿಮ ಪಟ್ಟಿಯನ್ನು ಸಾರ್ವಜನಿಕರ ತಿಳುವಳಿಗಾಗಿ ಈಗಾಗಲೇ ಪ್ರಕಟಿಸಲಾಗಿದೆ.

ಪ್ರಸ್ತುತ ಅವಕಾಶವನ್ನು ಸದುಪಯೋಗ ಪಡಿಸಿಕೊಂಡ ಎಲ್ಲಾ ಅರ್ಹ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ನೊಂದಾಯಿಸಿಕೊಳ್ಳುವಂತೆ ಜಂಟಿ ಮುಖ್ಯ ಚುನಾವನಾಧಿಕಾರಿ ಸಿ.ಆ.ಸು.ಇ. (ಚುನಾವಣೆಗಳು) ಇವರು ಪ್ರಕಟಣೆ ಮೂಲಕ ಕೋರಿದ್ದಾರೆ.